ಶ್ರೀ ಕೆ. ಶ್ರೀನಿವಾಸುಲು ನಾಯುಡು.—ತಮ್ಮ ಈ ಉತ್ತರವನ್ನು ನೋಡಿದರೂ ಎಲ್ಲವೂ ಲೋಕಾಭಿರಾಮವಾಗಿ ಉತ್ತರ ಕೊಟ್ಟಂತೆ ಕಾಣುತ್ತದೆ. ಪ್ರತ್ಯೇಕ ನಿರ್ದೇಶನಾಲಯ ಮಾಡಿದರೆ ಗಾಂಧೀಜಿಯವರ ಕನಸು ನನಸಾಗುತ್ತದೆ. ಈ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಒಂದೊಂದು ಇಲಾಖೆಗೂ ಹೊಂದಾಣಿಕೆ ಇಲ್ಲ, ರೂರಲ್ ಪ್ಲಾನಿಂಗ್ ಸರಿಯಿಲ್ಲ, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ.ಪ್ರಭಾಕರ್.—ಉತ್ತರ ಸಮಂಜಸವಾಗಿಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಪ್ರಶ್ನೆ ಯಾವರೂಪದಲ್ಲಿರುತ್ತದೋ ಉತ್ತರ ಕೂಡ ಅದೇ ರೂಪದಲ್ಲಿರುತ್ತದೆ.

ಶ್ರೀ ಎಂ. ಬಿ ರಾಮಸ್ವಾಮಿ.—ಸ್ವಾಮಿ, ಮೂಲ ಉದ್ದೇಶ ಇರುವುದು ಪಂಚಾಯಿತಿ ರಾಜ್ಯಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯ ಮಾಡುವುದಕ್ಕಾಗುತ್ತದೆಯೇ ಎನ್ನುವುದು. ಗ್ರಾಮಾಂತರ ಪ್ರದೇಶದಲ್ಲಿ ಒಳ್ಳೆಯ ಆಡಳಿತ ಆಗಬೇಕಾದರೆ, ಪಂಚಾಯಿತಿ ಮಟ್ಟದಲ್ಲಿ ಒಳ್ಳೆಯ ಆಡಳಿತ ಆಗಬೇಕೆಂಬುದನ್ನು ಅಧಿಕಾರಿಗಳು ಒಪ್ಪಿದ್ದಾರೆ. ತಾವು ಒಪ್ಪಿಕೊಂಡಿದ್ದೀರಿ. ಮಾನ್ಯ ಅಧ್ಯಕ್ಷರೇ ಇಲಾಖೆಗಳ ಮಧ್ಯೆ ಹೊಂದಾಣಿಕೆ ಇಲ್ಲದೆ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ನಾನು ಹೇಳುವುದಾದರೂ ತಾವು ದೊಡ್ಡ ಮನಸು ಮಾಡಿ ಪ್ರತ್ಯೇಕ ನಿರ್ದೇಶನಾಲಯ ಮಾಡಿ, ರೈತರಿಗೆ, ಬಡವರಿಗೆ ಹೆಚ್ಚಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಗ್ರಾಮಾಂತರ ಪ್ರದೇಶದಲ್ಲಿ ಈಗ ಇರುವ ವ್ಯವಸ್ಥೆಯಿಂದ ಸಮುದಾಯ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯುತ್ತವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು ಹೇಗಿರಬೇಕೆಂಬ ಬಗ್ಗೆ ಸೂಚನೆ ಮಾಡಿದರೆ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಬೈರಾಪ್ಪಾಜಿ.—ಪ್ರತ್ಯೇಕ ನಿರ್ದೇಶನಾಲಯವನ್ನು ಮಾಡಿದರೆ ಉತ್ತಮವಾದ ಕಾರ್ಯವನ್ನು ಮಾಡಿದಂತಾಗುತ್ತದೆ. ಮಹಾರಾಷ್ಟ್ರ, ಗುಜರಾತ್ ಮತ್ತಿತರ ಕಡೆಗಳಲ್ಲಿ ಪ್ರತ್ಯೇಕ ನಿರ್ದೇಶನಾಲಯಗಳನ್ನು ಮಾಡಿದ್ದಾರೆ ಈಗಿನ ಪದ್ಧತಿ ಪ್ರಕಾರ ರೀತಿನೀತಿ ಪ್ರಕಾರ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ನಿರ್ದೇಶನಾಲಯವನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕೆ ಪ್ರಭಾಕರ್.—ಆಂಧ್ರದಲ್ಲಿ ಮೂರು ರೀತಿಯ ಸಿಸ್ಟಂ ಇದೆ. ನಮ್ಮಲ್ಲಿ ಎರಡು ರೀತಿಯ ಸಿಸ್ಟಂ ಇದೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಎಲ್ಲಾ ಕೆಲಸಗಳು ಕಾರ್ಯಗತವಾಗುತ್ತಿವೆ. ಈಗಿನ ವ್ಯವಸ್ಥೆ ಸರಿಯಲ್ಲ ಎಂದರೆ ಬೇರೆ ಯಾವರೀತಿ ವ್ಯವಸ್ಥೆ ಮಾಡಬೇಕೆಂಬುದನ್ನು ತಿಳಿಸಿ.

L. F. Dispensary building at Hagalawadi

86. SRI T. TARE GOWDA (Kallambella)—Will the Minister for Health be pleased to state :—

(*a*) whether the estimate for constructing the L.F. Dispensary building at Hagalawadi, Gubbi Taluk has been sanctioned; if so, the estimated cost of the same;

(*b*) whether the Government is aware that the Housing Board has agreed to construct buildings for Doctors Quarters in the village at the free site given by the village Panchayat;

(*c*) the steps taken to make provision for this work in the budget of 1977-78 ?

SRI H. M. Channabasappa (Minister for Health).—

(*a*) No.

(*b*) Yes.

(*c*) No provision is made due to paucity of funds with the Housing Board.

ಶ್ರೀ ಟಿ. ತಾರೇಗೌಡ.—ಸ್ವಾಮಿ, ಹಾಗಲವಾಡಿ ಆಸ್ಪತ್ರೆಯನ್ನು ಜಿಲ್ಲಾ ವೈದ್ಯಾಧಿಕಾರಿಗಳಾಗಲೀ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಡೈರೆಕ್ಟರಾಗಲೀ ಕಣ್ಣಿನಿಂದ ನೋಡಿದ್ದಾರೆಯೇ ?

† ಶ್ರೀ ಹೆಚ್.ಎಂ. ಚನ್ನಬಸಪ್ಪ.—ನೋಡಿಯೆಂ ಅಂದಾಜು ಮಾಡಿರುವುದು.

ಶ್ರೀ ಟಿ. ತಾರೇಗೌಡ.—ಇದು ಪ್ರಾರಂಭವಾಗಿ ೧೦-೧೫ ವರ್ಷಗಳಾಗಿದ್ದು ಇವತ್ತು ಈ ಕಟ್ಟಡ ಬೀಳುವ ಸ್ಥಿತಿಯಲ್ಲಿದೆ. ಆದರಲ್ಲಿಯೇ ಇವತ್ತಿಗೂ ಕೆಲಸ ನಡೆಯುತ್ತಿದೆ. ಯಾವಾಗ ಬಿದ್ದು ವೈದ್ಯರುಗಳು ಹಾಗೂ ರೋಗಿಗಳು ಸಾಯುತ್ತಾರೋ ಗೊತ್ತಿಲ್ಲ ೯ ಸಾವಿರ ರೂಪಾಯಿಗಳನ್ನು ಪಂಚಾಯಿತಿಯವರು ಕೊಟ್ಟಿದ್ದಾರೆ ತಾಲ್ಲೂಕು ಬೋರ್ಡಿನವರು ಹಣ ಕೊಟ್ಟಿದ್ದಾರೆ. ಇದನು ಗಮನಿಸಿ ಆದಷ್ಟುಬೇಗ ಕಟ್ಟಡವನ್ನು ಮಂಜೂರು ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಂಜೂರು ಮಾಡಿಕೊಡುತ್ತೇನೆ.

Development of Homoeopathy

189. Sri K. R. Srinivasulu Nayudu (Shantinagar).—Will the Minister for Health be pleased to state:—

(*a*) whether there is any proposal before the Government to start a Homoeopathic college in the State;

(*b*) the reasons for not starting such college;

(*c*) whether it has come to the notice of the Government that there are Government Homoeopathic colleges in almost all the States in India;

(*d*) the steps taken to implement the recommendation for starting a Homoeopathic college contained in Dr. Melkote's Committee Report;

(*e*) whether it has come to the notice of the Government that the Budget provision made for the development of Homoeopathy has lapsed twice ?

Sri H M. Channabasappa (Minister for Health).—

(*a*) Yes.

(*b*) The proposal will be examined during the next financial year.

(*c*) Homoeopathic colleges are functioning in some States.

(*d*) Does not arise in view of reply to clause (b).

(*e*) Yes.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಡು—ಸ್ವಾಮಿ, ನನ್ನ ಮೂರು ಪ್ರಶ್ನೆಗಳಿಗೂ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಉತ್ತರಿಸಿದ್ದೀರಿ. ಮೂರು ವರ್ಷಗಳಿಂದಲೂ ಕೇಳಿ ಕೇಳಿ ಸಾಕಾಗಿದೆ. ಆಯುರ್ವೇದ, ಹೋಮಿಯೋ ಪಥಿ ಬಗ್ಗೆ ಸರ್ಕಾರದ ಖಚಿತವಾದ ನಿಲುವು ಏನು ಎಂಬುದನ್ನು ಹೇಳುತ್ತೀರಾ?